# ಕಣ್ಣೂರು ಗ್ರಾಮ ಪಂಚಾಯಿತಿ ಕಾರ್ಯಾಲಯ

## ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು

ಗ್ರಾಮ ಪಂಚಾಯಿತಿ ಕಾರ್ಯಾಲಯ
ನಂ. 45/25-26
ದಿನಾಂಕ 30-10-25
ಬಿದರಹಳ್ಳಿ ಹೋಬಳಿ
ಬೆಂಗಳೂರು ಪೂರ್ವ ತಾಲ್ಲೂಕು

ದಿನಾಂಕ: 30/10/2025

## ದೃಢೀಕರಣ ಪತ್ರ

ಕಾನ್‌ಕರ್ಡ್ ಹೌಸಿಂಗ್ ಕಾರ್ಪೋರೇಷನ್ ಪ್ರೈ.ಲಿ Rep. by Director ಶ್ರೀ. ಆರ್.ಜಿ.ಅನಿಲ್ ನಂ 40/1, ವಿಠಲ್ ಮಲ್ಯ ರಸ್ತೆ, ಶಾಂತಲಾನಗರ, ಬೆಂಗಳೂರು ಆದ ನೀವು ಈ ಕಛೇರಿಗೆ ಮನವಿ ಸಲ್ಲಿಸಿರುವುದು ಸರಿಯಷ್ಟೇ. ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ಪೂರ್ವ ತಾಲ್ಲೂಕು, ಕಣ್ಣೂರು ಗ್ರಾಮದ ಸರ್ವೆ ನಂ 108/1, 108/2, 108/3, 110/2 ಒಟ್ಟು 3 ಎಕರೆ ಜಮೀನಿನಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಉದ್ದೇಶಿತ ಬಹು ಮಹಡಿ ವಸತಿ ಸಮುಚ್ಚಯ ನಕ್ಷೆ ಅನುಮೋದನೆ ಪಡೆಯಲು ಉದ್ದೇಶಿಸಲಾಗಿದ್ದು, ಸದರಿ ಗ್ರಾಮ ಪಂಚಾಯಿತಿ ವತಿಯಿಂದ ಬಡಾವಣೆಗೆ ನೀರು ಮತ್ತು ಮೂಲಭೂತ ಸೌಕರ್ಯ ನೀಡುವ ಬಗ್ಗೆ ದೃಢೀಕರಣ ಪತ್ರವನ್ನು ಕೋರಿರುತ್ತೀರಿ.

ಈ. ಬಗ್ಗೆ ಪರಿಶೀಲಿಸಲಾಗಿ ಮೇಲ್ಕಂಡ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕಣ್ಣೂರು ಗ್ರಾಮದ ಸರ್ವೆ ನಂ 108/1, 108/2, 108/3, 110/2 ಒಟ್ಟು 3 ಎಕರೆ ಜಮೀನಿನಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಕ್ಷೆಯನ್ನು ಅನುಮೋದಿಸಿಕೊಂಡು ಅನುಮೋದಿತ ನಕ್ಷೆಯನ್ವಯ ಬಹುಮಹಡಿ ವಸತಿ ಸಮುಚ್ಚಯವನ್ನು ನಿರ್ಮಾಣ ಮಾಡಿ, ಪೂರ್ಣಗೊಳಿಸಿ, ಅಗತ್ಯ ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಿದ ನಂತರ ನೀರು ಸರಬರಾಜಿಗೆ ಮತ್ತು ಮೂಲಭುತ ಸೌಕರ್ಯಕ್ಕೆ ಸಂಬಂಧಿಸಿದಂತೆ ಕಛೇರಿಗೆ ಪಾವತಿಸಬೇಕಾದ ಶುಲ್ಕವನ್ನು ಪಾವತಿಮಾಡಿದ ನಂತರ ಕುಡಿಯುವ ನೀರಿನ ಲಭ್ಯತೆಗೆ ಅನುಗುಣವಾಗಿ ನೀರು ಸರಬರಾಜು ಮಾಡಲು ಮತ್ತು ಮೂಲಭೂತ ಸೌಕರ್ಯವನ್ನು ನೀಡಲು ಯಾವುದೇ ಅಭ್ಯಂತರ ಇರುವುದಿಲ್ಲವೆಂದು ಈ ಪತ್ರದ ಮೂಲಕ ದೃಢೀಕರಿಸಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು
ಕಣ್ಣೂರು ಗ್ರಾಮ ಪಂಚಾಯಿತಿ
ಬೆಂಗಳೂರು ಪೂರ್ವ ತಾಲ್ಲೂಕು
ಬೆಂಗಳೂರು ನಗರ ಜಿಲ್ಲೆ